ಶ್ರೀ ಎಂ.ಮಲ್ಲಿಕಾರ್ಜುನ ಖಾರ್ಗೆ.—ನಮ್ಮ ಕಡೆ ಇರುವುದು ಡ್ರೈ ಲ್ಯಾಂಡ್. ಈ ಕಡೆ ಮೂರು ನಾಲ್ಕು ಎಕರೆ ಇಟ್ಟುಕೊಂಡಿರುವವರು ಕಾರ್ ಇಟ್ಟುಕೊಂಡಿರುತ್ತಾರೆ. ನಮ್ಮ ಕಡೆ ೨೦ ಎಕರೆ ಇದ್ದರೂ ಏನೂ ಪ್ರಯೋಜನ ಇಲ್ಲ. ಜೋಳ ಏನಾದರೂ ಬಿತ್ತಿಕೊಂಡು ಜೀವನ ಮಾಡುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಂದಾಯ ಯಾವಾಗ ಯಾವಾಗ ವಿನಾಯಿತಿ ಕೊಟ್ಟಿದ್ದೀವಿ ಆದು ಆಫೀಸ್ ರೆಕಾರ್ಡ್‌ನಲ್ಲಿರುತ್ತದೆ. ಆ ಬಗ್ಗೆ ಆಜ್ಞೆ ಇದೆ ಆದನ್ನು ಕಳುಹಿಸಿಕೊಡುತ್ತೇನೆ ೨೦ ವರ್ಷದಲ್ಲಿ ಎಷ್ಟು ವರ್ಷ ಕಂದಾಯ ಸೂಟ್ ಬಿಟ್ಟಿದ್ದೇವೆ ಆದನ್ನು ವಸೂಲು ಮಾಡುವುದಕ್ಕೆ ಬರುವುದಿಲ್ಲ. ವಸೂಲು ಮಾಡಕೂಡದು ಎಂದು ಹೇಳಿದ್ದೇವೆ. ದೌರ್ಜನ್ಯ ಏನಾದರೂ ಈ ವಿಚಾರದಲ್ಲಿ ಆಗಿದ್ದರೆ ವಿಚಾರಣೆ ಮಾಡುತ್ತೇನೆ. ೧೯೫೪ ರಿಂದ ವಸೂಲು ಮಾಡತಕ್ಕ ವಿಚಾರದಲ್ಲಿ ಗೊಂದಲ ಇದೆ. ಆದನ್ನು ನಾನು ಒಪ್ಪುತ್ತೇನೆ. ಡಿ.ಸಿ.ಜಿ.ನಲ್ಲಿ ಆಕೌಂಟ್ ಸರಿಯಾಗಿ ಮಾಡುವುದಿಲ್ಲ. ಕೆಲವು ರೈತರು ಹಣ ಕಟ್ಟಿದ್ದೇವೆ ಎಂದು ಹೇಳುತ್ತಾರೆ. ರಸೀತಿ ಕಳೆದುಹೋಗಿದೆ ಎಂದು ಹೇಳುತ್ತಾರೆ. ಇದೆಲ್ಲಾ ಆಗುತ್ತದೆ. ಇದರ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಳೇ ಪಟ್ಟಾವಾರ್ ಕೂಡ ವಸೂಲು ಮಾಡಿದರೂ ಲೆಕ್ಕಕ್ಕೆ ಜಮಾ ಮಾಡಿಕೊಳ್ಳುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೌದು. ವಸೂಲು ಮಾಡಿದರೂ ಜಮಾ ತೋರಿಸಿಲ್ಲ ೫೦೦ ರೂಪಾಯಿ ವಸೂಲು ಮಾಡಿದ್ದರೆ ೫೦ ರೂಪಾಯಿ ಎಂದು ರಸೀತಿ ಕೊಟ್ಟಿರುತ್ತಾರೆ. ಅಂಥ ಉದಾಹರಣೆಗಳಿವೆ. ಸ್ಪೆಸಿಫಿಕ್ಕಾಗಿ ನೀವು ಹೇಳಿದ ತಾಲ್ಲೂಕಿನಲ್ಲಿ ಡೀಟೈಲ್ ರಿಪೋರ್ಟ್ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಮುಂದಿನ ಗಮನ ಸೆಳೆಯುವ ಸೂಚನೆ...

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಿನಿಟಿಂಗ್‌ಗೆ ಹೋಗಿದ್ದಾರೆ ಬೇಕಾದರೆ ಕರೆಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದೇನೆ. ಆದರೆ ಹೇಗಿದ್ದರೂ ಮಾನ್ಯ ಸದಸ್ಯರಿಲ್ಲ, ನಾಳೆ ತೆಗೆದುಕೊಳ್ಳಿ. ನಾಳೆ ಮಂತ್ರಿಗಳು ಬರದಿದ್ದರೆ ನಾನೇ ಉತ್ತರ ಕೊಡುತ್ತೇನೆ, ಕಾರಣ ಇಷ್ಟೆ ವಾಟರ್ ಬೋರ್ಡ್ ಛೇರ್ಮನ್ನರು ಕಾಲವಾಗಿದ್ದಾರೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಆಯಿತು. ಈಗ ನಿಯಮ ೩೩೪ರ ಮೇರೆಗೆ ಪ್ರಸ್ತಾಪಿಸುವ ವಿಷಯಗಳು.

ನಿಯಮ ೩೩೪ರ ಮೇರೆಗೆ

ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಸುತಗಟ್ಟಿ ಗ್ರಾಮಗಳಲ್ಲಿ ಕಟ್ಟಿರುವ ಶಾಲಾ ಕಟ್ಟಡಗಳ ದುಸ್ಥಿತಿಯ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಸುತಗಟ್ಟಿ ಪುನರ್ ವಸತಿ ಗ್ರಾಮಗಳಲ್ಲಿ ಕಾರ್ಯ ನಿರ್ವಹಣ ಅಭಿಯಂತರರು ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ ವಿಭಾಗ ನವಿಲುತೀರ್ಥದ ಸದಸ್ಯತ್ವ ತಾಲ್ಲೂಕಿನಲ್ಲಿ ಕೆಲವು ಶಾಲೆಗಳನ್ನು ಕಟ್ಟಿದ್ದು ಅವುಗಳ ಗುಣಮಟ್ಟ ಚೆನ್ನಾಗಿ ಇರದೆ ಇದ್ದುದರಿಂದ ಆ ಶಾಲೆಗಳು ಯಾವುದೇ ಸಂದರ್ಭದಲ್ಲಿ ಬೀಳುವ ಸ್ಥಿತಿಯಲ್ಲಿವೆ.

ಅಧ್ಯಕ್ಷರು ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ ಬೆಳಗಾಂವ ಇವರು ರಿಪೇರಿ ಮಾಡಲು ಅನುಮತಿ ನೀಡಿದ್ದರೂ ಇದುವರೆಗೆ ರಿಪೇರಿ ಮಾಡಿರುವುದಿಲ್ಲ ಆದಕಾರಣ ರಿಪೇರಿ ಮಾಡಲು ಮುಖ್ಯ ಇಂಜಿನೀಯರ್ ಇರಿಗೇಷನ್ ಉತ್ತರ ವಲಯ, ಬೆಳಗಾಂವ ಇವರಿಗೆ ಆದೇಶ ನೀಡಬೇಕು ಎಂದು ನಾನು ತಮ್ಮ ಮುಖಾಂತರ ನೀರಾವರಿ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಾನು ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಇದು ಏನು ಅಧ್ಯಕ್ಷರೇ ನಾವು ಏನು ಹೇಳಿದರೂ ಕೇಳುವುದಕ್ಕೆ ತಯಾರು ಇಲ್ಲ ಈ ಬಗ್ಗೆ ಒಂದು ವರದಿ ಕೊಡುವುದಕ್ಕೆ ತಯಾರು ಇಲ್ಲ. ಕೇಳಿದ್ದಕ್ಕೆಲ್ಲಾ ಪರಿಶೀಲನೆ ತರಿಸಿಕೊಡುತ್ತೇವೆ ಎಂದರೆ ಏನು ?

ಅಧ್ಯಕ್ಷರು.—ಕೌಜಲಗಿಯವರೇ ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆಯೇ ತರಿಸಿಕೊಡುತ್ತೇನೆ.

ಸುಪ್ರೀಮ್ ಕೋರ್ಟಿನ ತೀರ್ಪಿನಂತೆ ಕೆ.ಎ.ಎಸ್. ಅಧಿಕಾರಿಗಳ ಪದೋನ್ನತಿಯ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಗೋಣಾಳ ಭೀಮಪ್ಪ ಹಾಗೂ ಮತ್ತಿತರರ ಪ್ರಕರಣದ ಸಿವಿಲ್ ರಿಟ್ ಪಿಟಿಷನ್ ನಂ. ೧೧೮೮೬೬ಕ್ಕೆ ಸಂಬಂಧಿಸಿದಂತೆ ಆಗಸ್ಟ್ ೧೧-೧೯೮೭ ರಂದು ಸುಪ್ರೀಮ್ ಕೋರ್ಟ್ ನೀಡಿದ ತೀರ್ಪಿನಂತೆ ಸರ್ಕಾರದಿಂದ ನೇರ ನೇಮಕಾತಿಯಾದ ಕೆಎಎಸ್ ಕಿರಿಯ ಶ್ರೇಣಿ ಅಧಿಕಾರಿಗಳ ಪದೋನ್ನತಿಯ ಬಗ್ಗೆ ಸರ್ಕಾರವು ಯಾವುದೇ ಕ್ರಮವನ್ನು ಕೈಕೊಂಡಿಲ್ಲ ಇದರಿಂದ ನೇರವಾಗಿ ನೇಮಕಾತಿಯಾದ ಕೆಎಎಸ್ ಅಧಿಕಾರಿಗಳಿಗೆ (ಪ್ರಥಮ ದರ್ಜೆ) ತುಂಬಾ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯವಾಗಿದೆ ಕಳೆದ ಆಗಸ್ಟ್‌ನಲ್ಲಿಯೇ ತೀರ್ಪು ದೂರ ಬಂದಿದ್ದರೂ ಸರ್ಕಾರ ಆದೇಶವನ್ನು ಜಾರಿಗೆ ತರುವಲ್ಲಿ ವಿಳಂಬ ಮಾಡಿದೆ ಇನ್ನು ಮುಂದಾದರೂ ಇದನ್ನು ಸರಿಪಡಿಸಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಭಾರತ ಸರ್ವೋಚ್ಚ ನ್ಯಾಯಾಲಯದ ಶ್ರೀ ಗೋಣಾಳ್ ಭೀಮಪ್ಪ ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ದಿನಾಂಕ ೧೧-೮-೧೯೮೭ರಂದು ನೀಡಿದ್ದ ತೀರ್ಪಿನ ಅನುಸಾರ ಕರ್ನಾಟಕ ಆಡಳಿತ ಸೇವಾ (ಎ-ಸಮೂಹ-ಕಿರಿಯ ಶ್ರೇಣಿ) ಅಧಿಕಾರಿಗಳ ಕರಡು ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ ೮-೨-೧೯೮೮ ಸಂಖ್ಯೆ ಡಿಪಿಎಆರ್ ೫೭ ಎಸ್‌ಕೆಜಿ ೮೭ರ ಅಧಿಸೂಚನೆಯಲ್ಲಿ ಪ್ರಕಟಿಸಿ ಆ ಜ್ಯೇಷ್ಠತಾ ಪಟ್ಟಿಯಲ್ಲಿ ನೀಡಿರುವ ಜ್ಯೇಷ್ಠತೆಯಿಂದ ಬಾಧಿತರಾದ ಅಧಿಕಾರಿಗಳಿಂದ ಆರ್ಜಿಗಳನ್ನು ೧೫ ದಿನಗಳೊಳಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆ ನಿಗದಿತ ಅವಧಿಯನ್ನು ಕೋರಿಕೆಯ ಮೇಲೆ ಮತ್ತೆ ದಿನಾಂಕ ೫-೩-೧೯೮೮ರವರೆಗೆ ವಿಸ್ತರಿಸಲಾಗಿತ್ತು. ಆ ಅವಧಿಯಲ್ಲಿ ೧೫೯ ಅಧಿಕಾರಿಗಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಪ್ರಸಕ್ತ ಆಕ್ಷೇಪಣೆಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಸದ್ಯದಲ್ಲಿಯೇ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು. ಅದಾದನಂತರ ಅಹರಾದ ಅಧಿಕಾರಿಗಳಿಗೆ ಪದೋನ್ನತಿ ನೀಡಲಾಗುವುದು. ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟವಾಗುವವರೆಗೆ ಯಾವುದೇ ಬಡ್ತಿ ಪ್ರಕರಣಗಳನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

3) ಉಡುಪಿ ತಾಲ್ಲೂಕು ಪ್ರಾದೇಶಿಕ ಸಾರಿಗೆ ಕಚೇರಿಗೆ ಪುತ್ತೂರಿನಲ್ಲಿ ಪ್ರತ್ಯೇಕ ನಿವೇಶನವನ್ನು ನೀಡುವುದು.

ಶ್ರೀ ವಸಂತ ವಿ. ಸಾಲಿಯಾನ್.—ಅಧ್ಯಕ್ಷರೇ, ಉಡುಪಿ ತಾಲ್ಲೂಕು ಪ್ರಾದೇಶಿಕ ಸಾರಿಗೆ ಕಚೇರಿಗೆ ಪುತ್ತೂರು ಗ್ರಾಮದಲ್ಲಿ ಸ್ಥಳ ಮಂಜೂರಾಗಿದ್ದು ಈ ನಿವೇಶನದ ಪಕ್ಕದಲ್ಲೇ ಹರಿಜನ ಶಾಲೆ ಇರುವುದರಿಂದ ಆ ಜಮೀನನ್ನು ಆಟದ ಮೈದಾನಕ್ಕೆ ನೀಡಬೇಕಾಗಿ ಶಾಲಾಭಿವೃದ್ಧಿ ಮಂಡಲಿಯವರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಇದರಿಂದಾಗಿ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡ ಕಟ್ಟಿಸಲು ನಿವೇಶನ ಇಲ್ಲವಾಗಿದೆ. ಸರ್ಕಾರ ಕೂಡಲೇ ಉಡುಪಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಪ್ರತ್ಯೇಕ ನಿವೇಶನ ಮಂಜೂರು ಮಾಡಿ ಸ್ವಂತ ಕಟ್ಟಡ ಕಟ್ಟಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀ ಸಾಗರ್.—ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಸ್ವಾಮಿ.